**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 277/ 2018**

| | | |
|---|---|---|
| ಸಾಕ್ಷಿಯ ಹೆಸರು | : ರಾಜಣ್ಣ ಜಿ.ವಿ. | |
| ತಂದೆಯ ಹೆಸರು | : ಲೇಟ್ ವೆಂಕಟರಮಣಪ್ಪ | |
| ವಯಸ್ಸು | : 66 ವರ್ಷ | |
| ಉದ್ಯೋಗ | : ನಿವೃತ್ತ ಎಎಸ್ ಐ, | ಚಾಸಾ – 17 |
| ವಾಸ ಸ್ಥಳ | : ಬೆಂಗಳೂರು | ಪ್ರಾಸಾ – 11 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 13.01.2026**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು 2017ನೇ ಸಾಲಿನಿಂದ 2019ನೇ ಸಾಲಿನವರೆಗೆ ಕುಮಾರಸ್ವಾಮಿ ಪೋಲಿಸ್ ಸ್ಟೇಷನ್ ಬೆಂಗಳೂರು ನಗರದಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 10.11.2017 ರಂದು ನಾನು ಠಾಣೆಯಲ್ಲಿದ್ದಾಗ ನಮ್ಮ ಪಿಎಸ್ಐ ಸುಬ್ರಹ್ಮಣ್ಯರವರು ನನ್ನನ್ನು ಹಾಗೂ ಚಾಸಾ 14 ರಿಂದ ಚಾಸಾ 16 ರವರನ್ನು ಕರೆಸಿ ನಮ್ಮ ಠಾಣಾ ಮೊ. ಸಂಃ 379/2017 ರಲ್ಲಿ ಆರೋಪಿಗಳನ್ನು ಪತ್ತೆ ಮಾಡಿಕೊಂಡು ಬರಲು ನಮ್ಮಗಳನ್ನು ನೇಮಿಸಿದ್ದರು. ಅದರಂತೆ ನಾವು ನಮ್ಮ ಠಾಣಾ ಸರಹದ್ದಿನಲ್ಲಿ ಗಸ್ತು ಮಾಡಿಕೊಂಡು ಸುಮಾರು ರಾತ್ರಿ 10.30 ರ ಸಮಯದಲ್ಲಿ ಡಾಃ ಅಬ್ದುಲ್ ಕಲಾಂ ಪಾರ್ಕ್ ಹತ್ತಿರ ವಾಹನ ತಪಾಸಣೆ ಮಾಡುತ್ತಿರುವಾಗ ಯಾರೋ ಇಬ್ಬರು ಆಸಾಮಿಗಳು ಒಂದು ದ್ವಿಚಕ್ರ ವಾಹನದಲ್ಲಿ ಬಂದು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದರು. ನಾವು ತಕ್ಷಣ ಅವರನ್ನು ಸುತ್ತುವರೆದು ಹಿಡಿದು ವಿಚಾರ ಮಾಡಲಾಗಿ ಸಮಂಜಸವಾದ ಉತ್ತರ ನೀಡದಿದ್ದ ಕಾರಣ ಅವರಿಬ್ಬರನ್ನು ಮತ್ತು ವಾಹನವನ್ನು ಹಿಡಿದುಕೊಂಡು ಹೆಸರು ವಿಳಾಸ ಕೇಳಲಾಗಿ ಮೊಹಮ್ಮದ್ ಪರಾಜ್ ಖಾನ್ ಮತ್ತು ಸೈಯದ್ ಹಬೀಬ್ ಎಂದು ತಿಳಿಸಿದರು. ಇವರು ಕಳ್ಳತನ ಮಾಡುವ ಉದ್ದೇಶದಿಂದ ಬಂದಿರುವರೆಂದು ಅನುಮಾನಗೊಂಡು ಇವರನ್ನು ಮತ್ತು ದ್ವಿಚಕ್ರವಾಹನ ಸಂಃ ಕೆಎ 05 – 2378 ಬಿಳಿಬಣ್ಣದ ವಾಹನವನ್ನು ಠಾಣೆಗೆ ತೆಗೆದುಕೊಂಡು ಬಂದು ಠಾಣೆಗೆ ಹಾಜರು ಪಡಿಸಿರುತ್ತೇವೆ. ಈ ಬಗ್ಗೆ ನಮ್ಮ ಠಾಣಾಧಿಕಾರಿಗೆ ನಿವೇದನೆ ನೀಡಿರುತ್ತೇನೆ. ಸಾಕ್ಷಿಗೆ ನಿವೇದನೆಯ ಯಥಾ ನಕಲನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–14 ಗುರುತಿಸಲಾಯಿತು.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ )

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ. ಕೊಳ್ಳೇಗಾಲ.